Regd No M 1299 Sri ತಾ|| 10—10—51

SATYAVADI = 35th Year

ಸತ್ಯವಾದಿ

ಸ್ಥಾಪಕರು- ಅರಮನೆ ಸಿರಸ್ತೆದಾರ್ ಎ೦. ವಿ. ಸುಬ್ರಾಯರು [ಬಿಡಿ ಪ್ರತಿ 3 ಪೈ

ಮಲ್ಲನ ಮುತ್ತು

ನಾನೂ ಮೆಂಬರಾಗ್ತೀನಿ!

ನಾನೂ ಮೆಂಬರಾಗೋಣ ಅಂತ ಕಾಂಗ್ರೆಸ್ಸಿನ ದೊಡ್ಡ ವನುಷ್ಯರನ್ನು ನೋಡೋಕೆ ಹೋದೆ ಬಹಳ ಒಳ್ಳೆಯವರು : ಮಹಾತ್ಮ ಗಾಂಧೀ ಹೇಳಿದಂತೆ ನಡೆಯೋರು ; ಅವರಿಗೆ ತುಂಬಾ ಆಸ್ತರು ; ಗಾಂಧಿಯವರು ಹೊರಟು ಹೋಗುವಾಗ ವರೆತು ಬಿಟ್ಟಿರಬೇಕು ; ಗಪ್ತಿ ಇದ್ದಿದ್ದರೆ ಖಂಡಿತ ಇವರನ್ನೂ ಕರೆಕೊಂಡು ಹೋಗ್ತಿದ್ದರು.

ತುಂಬಾ ತತ್ವಜ್ಞಾನಿ ಸ್ವಾಮಿ : ಅನಂ, ಮಾತಾಡ್ತಾ ಇದ್ದಂಗೆ ನನಗೆ ಅಲ್ಲೇ ಮತ್ತುಬಂದ್ಹಂಗಾಯಿತು ; ಅಷ್ಟು ವಿಚಾರ ಕೇಳಿದ್ದು, ನಾನೇನೋ ಎಚ್ಚರವಾಗಿಯೇ ಇದ್ದೆ ಅಸ್ತಿ ; ಅಂತು ಒಳ್ಳೆಯ ವೇದಾಂತ : ನಾನೇನೋ ಕೇಳಿಯೇ ಇದ್ದೇನೆ; ನೀವೂ ಕೊಂಚ ಕೇಳಿ.

ಅಲ್ಲಾ ಕಣ್ರೀ. ಸ್ವರಾಜ್ಯದ ತತ್ವ ಅನ್ನೋದು ನಿವುಗೆ ಗೊತ್ತೆ ? ಅದನ್ನು ಕೊಂಚ ಮೊದಲು ತಿಳಿದುಕೊಳ್ಳಿ ; ದೇಶ ಸೇವೆ ಹೇಗೇಂದ್ರೆ, ದೇಶದಲ್ಲಿ ನಾನೂ ಸೇರ್ತಿಲ್ವೆ ? ನನ್ನ ಸೇವೆಯಾದರೆ ದೇಶದ ಸೇವೆಯಾಗ್ತಿಲ್ವೆ ? ಏನು, ಇಡೀ ದೇಶಕ್ಕೆಲ್ಲಾ ಒಂದೇ ಸಲ ಸೇವೆ ಮಾಡೋಕ್ಕಾಗತ್ತೇ ? ಮೊದಲು ನಾನು, ಅವೇಲೆ ಜನ ಹೀಗೆ ಒಂದೊಂದಾಗಿ ಹಂತ ಹತ್ಕೊಂಡು ಹೋಗ್ಬೇಕ್ಕಂಡ್ರೀ.

ಈಗ ನಾಲ್ಕು ವರ್ಷವಾಯ್ತು ; ಕೊಂಚ ಚನ್ನಾಗಿಯೇ ಮಾಡಿದು ಸೇವೆ ಮಾಡ್ಬೇಕೂಂತ ಮನಸ್ಸಿನಲ್ಲಿತ್ತು ; ನನ್ನ ಟ್ಟಿಗೆ ಕೊಂಚ ಮಾಡ್ದೆ ; ಸಾಲದು : ಇನ್ನು ವರ್ಷಗಳಲ್ಲಿ ಯೆಷ್ಟೂಂತ ತಾನೆ ಮಾಡೋಕೆ ಆದಾತು ; ನನ್ನ ಮನೆಯವರ ಮಾತಂತೂ ಕೇಳ್ಲೇ ಬೇಡಿ : ಹೆಚ್ಚಾಗಿ ಏನೂ ಮಾಡೋಕಾಗ್ನಿಲ್ಲ ; ಮಾರಾಯ ನೆಹರೂ ತುಂಬಾ ದೊಡ್ಡ ವನುಷ್ಯ ; ಒಳ್ಳೇ ವಿಚಾರವಂತ ; ಕಾಂಗ್ರೆಸ್ ವುಂತ್ರಿಗೊಳು ತಂತಮ್ಮ ಟ್ಟಿಗೆ ಏನಾದೂ ಮಾಡಿಕೊಂಡಿದ್ದಾರೆಯೇ ಹೊರತು ತಮ್ಮ ಜನಗಳಿಗಾಗಿ ಅಷ್ಟು ಹೆಚ್ಚಾಗಿ ಏನೂ ಮಾಡೋಕಾಗ್ಲಿಲ್ಲ ಅನ್ನೋದು ಅಶನಿಗೆ ಗೊತ್ತು ಅಂತ ಕಾಣ್ತಾದೆ : ಅದಕ್ಕೇನೆ ಕಾಂಗ್ರೆಸ್ಸಿನವರೆಲ್ಲಿಡ್ರೂ ಹೊಂಗಿನ ಒಳ್ಳೆಯವರನ್ನು ಸೇರಿಸಿಕೊಳ್ಳಿ ಅಂದಿದ್ದಾನೆ ಪುಣ್ಯಾತ್ಮ ನಾನೇನೋ ಈ ಸಲ ಚುನಾವಣೆಯಲ್ಲಿ ನಮ್ಮ ಜನಗಳು ಹೆಜ್ಜಾಗಿ ಅರಿಸಿಬರುವಹಾಗೆ ಮಾಡಿ ಮುಂದೆ ಸಾಧ್ಯವಾದಷ್ಟು ನಮ್ಮ ಜನಗಳ ಸೇವೆ ಮಾಡ್ತೀನಿ ಅಂದ್ರು ! “ ಮಲ್ಲ ”

ನಿನ್ನೆಯದಿನದ ಜಂಖ್ಯಾನಾ ರೇಸೆಸ್

1 ಲ್ಯಾಕ್ಸರ್ ಪ್ಲೇಟ್

ಪೆನ್ಸಿ, ಷೂಟಿಂಗ್ ಆರೋ ಬ್ಲಿಟ್ಸ್.

ಟೋಟು — ವಿಕ್ ರೂ 11-8-0, ಪ್ಲೇಸ್ ರೂ 5, 5, 5.

2 ಮಂಡಿ ಪ್ಲೇಟ್

ಅಫ್‌ಟಾಟ್, ಚಾಲೆಂಜ್ ಸ್ಟಾರ್, ಗೋವಿಂದ

ಟೋಟು — ವಿಕ್ ರೂ. 11 ವರೆ. ಪ್ಲೇಸ್ ರೂ 5 ವರೆ, ರೂ 5, ರೂ. 7 ವರೆ.

3 ದಸರಾ ಪ್ಲೇಟ್

ಬ್ಲೂಫ್ಲೇಂ. ವಿಕ್ ಎಗೇಕ್.

ಟೋಟು — ವಿಕ್ ರೂ. 6 ವರೆ ಪ್ಲೇಸ್ ರೂ 6, ರೂ 6 ವರೆ

4 ಲಲಿತಮಹಲ್ ಪ್ಲೇಟ್

ಪೈಟ ಫಾಸ್ಟ್ — ಟೋಟು ರೂ 6

5 ಅಖಿ ಕವರ್ಡ್ ಪ್ಲೇಟ್

ಮೈಜೇಬಿ, ಬ್ಲೋಕ್‌ಮಾಸ್ಟ್ ಕಬೀರ

ಟೋಟು— ವಿಕ್ ರೂ 25 ; ಪ್ಲೇಸ್ ರೂ 9-8-0, ರೂ 23, ರೂ 10

6 ಈಡಿಗಾ ಪ್ಲೇಟ

ಟೋಟು— ವಿಕ್ ರೂ 7, ಪ್ಲೇಸೆಸ್ ರೂ 6, ರೂ 10, ರೂ 13-8-0

ಶ್ರೀ ಚಂದ್ರಮೌಳೇಶ್ವರ ಸ್ವಾಮಿಯ ಮಹೋತ್ಸವದ

ಸ್ವಂ. ಸು. ತಂತಿ] ಡಾಕೋರ್ ಅ 8

ಶ್ರೀ ಚಂದ್ರಮೌಳೇಶ್ವರ ಮಹೋತ್ಸವವು ಅತ್ಯಂತ ನಿಜೃಂಭಣೆಯಿಂದ ನಿನ್ನೆ ಪ್ರಾರಂಭವಾಯಿತು. ಯಜ್ಞಮಂಟಪವೂ ಸಭಾಮಂಟಪವೂ ಪತಾಕೆಗಳಿಂದ ಶೃಂಗರಿಸಲ್ಪಟ್ಟಿದ್ದವು. ಪ್ರಾತಃಕಾಲದಲ್ಲಿ ಬ್ರಾಹ್ಮಣರು ವೇದಮಂತ್ರಗಳನ್ನು ಪಠಿಸಲು ಪ್ರಾರಂಭಿಸಿದರು. ಸಮಾರಂಭದಲ್ಲಿ ಭಾಗವಹಿಸಲು ಭಾರತದ ಮಹಾ ಸಂತರಾದ ಶ್ರೀ ಸ್ವಾಮಿ ಕರಪಾತ್ರಜೀಯವರು ಮಧ್ಯಾಹ್ನ ಆಗಮಿಸಿದರು. ಮತ್ತು ಸಾರ್ವಜನಿಕರಿಂದ ಅತ್ಯಾದರದಿಂದ ಸ್ವಾಗತಿಸಲ್ಪಟ್ಟರು. ಸಾಯಂಕಾಲ ಪ್ರಚಂಡ ಸಭೆಯು ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ನಡೆದು ಶ್ರೀ ರಾಮನಾಥ ವಕೀಲರು ಚಿಕ್ಕದಾದ ಸುಮಧುರ ಸ್ವಾಗತ ಭಾಷಣವನ್ನಾಡಿ. ಅದನ್ನು ಡಾಕೋರು ಮಹಾಜನರ ಪರವಾಗಿ ಶ್ರೀ ದಯಾಭಾಕ್ಕರವರು ಸಮರ್ಥಿಸಿದರು ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾ ಸ್ವಾಮಿಗಳವರು ಸ್ವಾಮಿ ಕರಪಾತ್ರಜೀಯವರ ವಿಷಯವಾಗಿ ಅಂದವಾದ ಭಾಷಣ ಮಾಡಿದರು. ಶ್ರೀ ಜಗದ್ಗುರುಗಳು ಹೇಗೆ ಸರಕಾರದ ನೀತಿಯಿಂದ ಸಾರ್ವಜನಿಕರು ಎಲ್ಲ ವಿಷಯಗಳಲ್ಲಿಯೂ ಪೀಡಿಸಲ್ಪಡುತ್ತಿರುವದೆಂಬುದನ್ನೂ, ಇದನ್ನು ತಪ್ಪಿಸಿ, ಭಾರತೀಯ ಸಂಸ್ಕೃತಿಯನ್ನು ಕಾಪಾಡುವ ಸಲುವಾಗಿ ರಾಮರಾಜ್ಯ ಪರಿಷತ್ತು ಸ್ಥಾಪಿಸಲ್ಪಟ್ಟಿರುವ ವಿಷಯವನ್ನು, ಮತ್ತು ಡೆಲ್ಲಿಯಲ್ಲಿ ಹೇಗೆ ಸತ್ಯಾಗ್ರಹ ನಡೆಯುತ್ತಿರುವುದೆಂಬುದನ್ನು, ಸತ್ಯಾಗ್ರಹಿಗಳು ಎಂತಹ ಅನುಚಿತ ಉಪಚಾರಕ್ಕೊಳಗಾಗಿರುವರೆಂಬುದನ್ನು ತಾವು ಜೀಕಾದಲೆ ಮಂತ್ರಿಗಳಿಗೆ ಹಿಂದೂಕೋಡು ಹೇಗೆ ಭಾರತೀಯ ಸಂಸ್ಕೃತಿಯ ಬುಡಕ್ಕೆ ಕೊಡಲಿ ಪ್ರಾಯವಾಗಿರುವುದೆಂಬುದನ್ನು ನಿಶ್ಚಯಪಡಿಸಿ ಕೊಡಲು ಸಿದ್ಧರಿರುವೆವೆಂದೂ, ಅದಕ್ಕೆ ಕರಪಾತ್ರಜೀಯವರ ಮೇಲೂ ಮಿತ್ತರರ ಮೇಲೂ ತೀವ್ರ ಅಶಿಚಾರ್ಜ ಮಾಡಲಾಯಿತೆಂದೂ, ಹೃದಯಂಗಮವಾದ ಸ್ಫೂರ್ತಿದಾಯಕವಾದ ತಮ್ಮ ಭಾಷಣದಲ್ಲಿ ವಿವರಿಸಿದರು ಹಿಂದೂಕೋಡು ಮಸೂದೆಯ ಮೇಲೆ ಪ್ರತಿಭಟನೆ ವ್ಯಕ್ತಪಡಿಸಲು ಸಾರ್ವಜನಿಕರು ರಾಮರಾಜ್ಯ ಪರಿಷತ್ತಿಗೆ ಸೇರಿ ರಾಮರಾಜ್ಯಪರಿಷತ್ತಿಗೆ ಮಹಾ ಚುನಾವಣೆಯಲ್ಲಿ ಓಟು ಕೊಡಬೇಕೆಂದು ತಿಳಿಸಿದರು. ಕರಪಾತ್ರಿ ಮಹಾರಾಜಕಿ ಜೈ ಜಯಘೋಷಣೆಯೊಡನೆ ಸ್ವಾಮೀಜಿಯವರು ಈ ದಿನ ಬೆಳಿಗ್ಗೆ ಡಾಕೊರಿನಿಂದ ತೆರಳಿದರು. ಮಹೋತ್ಸವವೂ ಮಹಾರುದ್ರ ಯಜ್ಞವೂ ಏಳು ದಿನಗಳು ನಡೆಯುವುವು. ತಾ|| 10 ಮತ್ತು 11 ರಲ್ಲಿ ಧರ್ಮ ಸಮ್ಮೇಳನವೂ ಸೇರುವುದು.

ಮಹೋತ್ಸವದ ಎರಡನೇ ದಿವಸದ ಕಾರ್ಯಕಲಾಪ

ಸ್ವಂ ಸು ತಂತಿ] ಡಾಕೋರು ಅ 9

ಡಾಕೋರಿನಲ್ಲಿ ಚಂದ್ರಮೌಳೇಶ್ವರ ಮಹೋತ್ಸವದ ಸಂಬಂಧದಲ್ಲಿ 2ನೇ ದಿನದ ಕಾರ್ಯ ಕಲಾಪಗಳು ಹೇರಳವಾಗಿದ್ದವು. ಬೆಳಿಗ್ಗೆ ಶ್ರೀ ಕರಪಾತ್ರಜೀ ಸ್ವಾಮಿಗಳ ಸಾರ್ವಜನಿಕರ ಬೀಳ್ಕೊಡುವಿಕೆ ಏರ್ಪಾಡಾಗಿತ್ತು. ಮಧ್ಯಾಹ್ನ ಸಮಾರಂಭಗಳಲ್ಲಿ ಭಾಗವಹಿಸಲು ಮತ್ತು ಯಜ್ಞ ದರ್ಶನಕ್ಕಾಗಿ ಸಂಸ್ಥೆಗಳಿಂದ ಬಹು ಮಂದಿ ಆಗಮಿಸಿದ್ದರು ಸಂಜೆ ಭಾರಿ ಸಭೆ ನಡೆಸಲ್ಪಟ್ಟು, ಅಹಮದಾಬಾದಿನ ಸರ್ದಾರ ಶಂಕರರು ತಮ್ಮ ಆನಂದದಾಯಕ ಶೈಲಿಯಲ್ಲಿ, ಭವ್ಯಸಭಾಂತವಾದ ತಮ್ಮ ಕವಿತೆ ಭಾಷಣಗಳಿಂದ ಸಭಿಕರನ್ನು ಆನಂದಿಸಿದರು. ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳವರು, ಸಭಿಕರನ್ನು ಕುರಿತು, ಏನೇ ಆದರೂ ಧರ್ಮವನ್ನು ಆಚರಿಸಬೇಕೆಂದೂ, ಮತ್ತು ಧರ್ಮವಿದ್ದೆಡೆ ವಿಜಯ ಖಂಡಿತವೆಂದೂ, ಧರ್ಮಾಚರಣೆಯಿಂದ ಲೋಕೋತ್ತರ ಕಾರ್ಯ ಸಾಧಿಸಬಹುದೆಂದೂ ತಿಳಿಸಿ ಜನರು ರಾಮರಾಜ್ಯ ಪರಿಷತ್ತಿಗೆ ಸೇರಿ ಅದರ ಉಮೇದುವಾರರಿಗೇ ಓಟು ಕೊಡಬೇಕೆಂದರು,

ಸಾಕಿಸಾಕಿನದಲ್ಲಿ ~~+~~ ಸೇರು ಉಪ್ಪಿಗೆ ರೂ 2 ಆಗಿದೆಯಂತೆ.

ಮೈಸೂರು ಸಂಸ್ಥಾನದಲ್ಲಿ ಮಾರ್ಚ್ 1950 ರ ವರಿಗಾಗುವ 9 ತಿಂಗಳಲ್ಲಿ 334 ಆತ್ಮಹತ್ಯಗಳಾಗಿವೆಯಂತೆ.

ಬೆಂಗಳೂರಿನಲ್ಲಿ ದಸರಾ ಹಬ್ಬದ ಸಂಬಂಧದಲ್ಲಿ ಆರ್. ಎಸ್. ಎಸ್. ಯುವಕರು ತಾ|| ೫ ಬೆಳಿಗ್ಗೆ ಸೈಕಲ್ ಮೇಲೆ ಸಯಾಹಾಕಾ ಮೆರವಣಿಗೆ ನಡೆಸಿದರು.

ಲಂಡನ್—ಮುಂಬರುವ ಚುನಾವಣೆಗಳ ಪ್ರಚಾರಕ್ಕಾಗಿ ಮುಖ್ಯವಂತ್ರಿ ಅಟ್ಲಿಯವರು 10 ದಿನಗಳಲ್ಲಿ 55 ಭಾಷಣಮಾಡಿದರು,

ಮೈಸೂರು ವರ್ತಮಾನ

ದಸರಾ ಮಹೋತ್ಸವ

ಈ ಬಾರಿ ದಸರಾ ಮಹೋತ್ಸವ ಮೈಭವಯುತವಾದದ್ದು. ಕಳೆದೆರಡು ವರ್ಷಗಳಿಂದ ನಿಂತಿದ್ದ ಜಂಬೂಸವಾರಿ ಮಹೋತ್ಸವ ಕೂಡ ಈ ಬಾರಿ ವೈಭವಪೂರ್ಣವಾಗಿದೆ.

ಮೈಸೂರು ದೊರೆಗಳು ಉತ್ತರ ಕರ್ನಾಟಕ ಪ್ರವಾಸ ಮಾಡಿ ಮೈಸೂರು ಜಿಲ್ಲೆಗೆ ಮೊದಲೇ ಇದ್ದ ಗೌಂವಾದರಗಳನ್ನು ಸ್ಥಿರಗೊಳಿಸಿದರು ಈಗ ಮೈಸೂರು ದೊರೆಗಳಿಗೆ ರಾಜಭಕ್ತಿ ಸಲ್ಲಿಸಲು ಉತ್ತರ ಕರ್ನಾಟಕದಿಂದ ಆಗಮಿಸಿರುವ ಜನತೆಯೇ ಇದಕ್ಕೆ ನಿದರ್ಶನವಾಗಿದೆ

ಇವಿಷ್ಟಲ್ಲದೆ ಜನಮನವನ್ನು ಆಕರ್ಷಿಸುವ ವಸ್ತುಪ್ರದರ್ಶನ, ಕನ್ನಂಬಾಡಿ ಇತ್ಯಾದಿಗಳೆಲ್ಲವೂ ವಿಶೇಷ ರೀತಿಯಲ್ಲಿ ಏರ್ಪಾಟಾಗಿವೆ

ಈ ಹೊತ್ತಿನಲ್ಲಿಯೇ ಮೈಸೂರಿನಲ್ಲಿಯೇ ಮೈಸೂರಿನಲ್ಲಿ ಶಾಸನವಿಧಾಯಕ ಮಂಡಳಿ ಸಮಾವೇಶವಾಗಿದೆ

ಮೈಸೂರು ನಗರಾಭಿಮುಖವಾಗಿ ವಿಶೇಷ ರೈಲುಗಳ ಓಟ. ಎಂದಿಗಿಂತ ಈ ಬಾರಿ ಮೈಸೂರಿಗೆ ಸೋಟಕರ ಸಂಖ್ಯೆ ಅಧಿಕವಾಗಿದೆ ಸರ್ಕಾರ ಕೂಡ ಬಂದಿರುವವರಿಗೆ ವಿಶೇಷ ಪಡಿತರ ಮಂಜೂರ್ಮಾಡಿತೆಂದು ಗೊತ್ತಾಗಿದೆ

ಶಾಸನ ಸಭೆ

ಮೊನ್ನೆ ಮೈಸೂರು ಶಾಸನ ಸಭೆ ಕ್ಯಾಫರ್ಡ್ ಮಂದಿರದಲ್ಲಿ ಮಾನ್ಯ ಶ್ರೀ ಎ. ಮೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ಸಮಾವೇಶವಾಗಿ ಬೆಂಗಳೂರು ನಗರಾಭಿವೃದ್ಧಿ ಸಮಿತಿ ತಿದ್ದುಪಡಿ ಮಸೂದಾ ಕಾನೂನಿನ ಪರಿಶೀಲನ ಸಮಿತಿಯು ವರದಿಯು ಚರ್ಚೆಯನ್ನು ಪ್ರಾರಂಭಿಸಿತು. ಮಸೂದೆ ಬಗ್ಗೆ ಮಾತನಾಡಿದ ಕಾಂಗ್ರೆಸ್ ಪಕ್ಷದ ಸದಸ್ಯರು ವಂದಿಗೆ ಬೆಂಬಲಿಸಿದರು. ಸಮಾಜವಾದಿ ಪಕ್ಷದ ಡಾ॥ ಶ್ರೀಕಂಠೇಶ್ವರರು ಈ ವರದಿಯನ್ನು ವಿರೋಧಿಸುತ್ತಾ, ನಗರಾಭಿವೃದ್ಧಿ ಸಮಿತಿಯನ್ನೇ ರದ್ದುಗೊಳಿಸಬೇಕೆಂದು ತಿಳಿಸಿದರು.

ಇಡೀ ಭಾರತದಲ್ಲಿಯೇ ಮೈಸೂರಿಗೆ ಸಾಟಿಯಾದ ದಸರಾ ಮಹೋತ್ಸವ ಮತ್ತೊಂದಿಲ್ಲ ಇಲ್ಲಿಯ ವೈಭವ, ಇಲ್ಲಿಯ ರಾಜಂ ನೈತಿಷ್ಯ ಮತ್ತೆಲ್ಲಿಯೂ ಕಾಣಬರುವುದಿಲ್ಲ. ಇಷ್ಟು ಜನ ಈ ಕಷ್ಟ ಪರಿಸ್ಥಿತಿಯಲ್ಲೂ ಕೂಡ ಜಮಾವಣೆ ಆಗಿ ಉತ್ಸಾಹಶಾಲಿಗಳಾಗಿರುವದೇ ಇದಕ್ಕೆ ಸಾಕ್ಷಿ.

ಯಶಸ್ವಿ ದಸರೆಗೆ ಕಾರಣರಾದ ಸರ್ಕಾರ, ಪೌರಸಭೆ ಸರ್ವರೂ ವಂದನಾರ್ಹರು.



"ಗೋರಕ್ಷಣ"

ಕಾರ್ಯ ಎಲ್ಲೆಲ್ಲೂ ನಡೆಯಲಿ

Protect the Cow

ಉಡ್‌ಲ್ಯಾಂಡ್ಸ್

5–10–51 ರಿಂದ

ಪ್ರತಿ ಸಂಸಾರವೂ ನೋಡಲೇಬೇಕಾದ

ಅಮೋಘ ಪೌರಾಣಿಕ ಹಿಂದಿ ಚಿತ್ರ

ಶ್ರೀ ಗಣೇಶ ಜನ್ಮ

ನಿರೂಪ ರಾಯ್, ತ್ರಿಲೋಕ್ ಕಪೂರ

ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ತಾ॥ 10 ರಿಂದ

— ಅ ಬಿ ಡಾ —

(ಸುಂದರ ಹಿಂದಿ ಚಿತ್ರ)

ಅಪೇರ—

ಜಯಪ್ರದ **2** ನೆ ವಾರ

ಸರ್ವಾಧಿಕಾರಿ

ಮಹೋನ್ನತ ತಮಿಳು ಚಿತ್ರ

ಪಾತ್ರ — ಅಂಜಲಿದೇವಿ, ನಾಗಯ್ಯ,

ರಾಮಚಂದ್ರ್, ಸಂಬಿಯಾರ್

ಪ್ರತಿ ದಿನ 3 ಆಟಗಳು

ಬೆಳಗಿನ ಪ್ರದರ್ಶನ 11–10–51 ರಿಂದ

ರಾತ್ ಕಿ ರಾಣಿ (ಹಿಂದಿ)

SATYAVADI
Advt Rate, Casual
Rs 2 per Col Inch

ಮೋತಿಲಾಲ್

5–10–51 ರಿಂದ

ನಿಮ್ಮಿ, ಶೇಖರ್, ಸುಲೋಚನ ಚಟರ್ಜಿ

ಪಾತ್ರವಹಿಸಿರುವ

ಬಡೀ ಬಹು

ಅಮೋಘ ಹಿಂದಿ ಚಿತ್ರ ದಿನ 3 ಆಟಗಳು

ಬೆಳಗಿನ ಪ್ರದರ್ಶನ 10–10–51 ರಿಂದ

ಅನ್ನೋಲ್ ಘಡಿ (ಹಿಂದಿ)

ಸತ್ಯವಾದಿ

ದಿನಪತ್ರಿಕೆ ತಿಂಗಳಿಗೆ 6 ಆಣೆಗಳು

ಸತ್ಯವಾದಿ ಸೋಮವಾರ ಸಂಚಿಕೆ

ವಾರ್ಷಿಕ ಚಂದಾ

ಅಂಚೆವೆಚ್ಚ ಸಮೇತ 1–14–0

ರಣಜಿತ್

ಅಮೋಘ **2** ನೇ ವಾರ

ಶಬಿನ್ತಾನ್

ಮನಮೋಹನ ಹಿಂದಿ ಚಿತ್ರ

ಪಾತ್ರ— ಕಣ್ಮಣಿಯಾದ ಶಾಂ,

ನಸೀಮ್, ಸಪ್ರೂ, ಕಕ್ಕೂ

ಪ್ರತಿ ದಿನ 3 ಆಟಗಳು

ಬೆಳಗಿನ ಪ್ರದರ್ಶನ 6–10–51 ರಿಂದ

ಮಿನಾ ಬಜಾರ್

12–10–51 ರಿಂದ ಅಮೋಘ ಪ್ರಾರಂಭ

ಚಾಮುಂಡೇಶ್ವರಿ ಮತ್ತು ಗಣೇಶ ಟಾಕೀಸುಗಳಲ್ಲಿ

ಸುಖಸಂಪತ್ ಚಿತ್ರಪಟದವರ ಮಹೋನ್ನತ ಪೌರಾಣಿಕ ಚಿತ್ರ

ತಿಲೋತ್ತಮೆ (ಕನ್ನಡ)

ಭೂಮಿಕೆ— ಜಯಶ್ರೀ, ಜಿ. ಆರ್. ಸ್ವಾಮಿಯವರ, ಕಲಾವಿಶಾರದ ಕೆಂಪರಾಜಪ್ಪ

ನಿರ್ದೇಶನ— ಆರ್. ಎಂ. ವೀರಭದ್ರಯ್ಯ [ಪ್ರತಿ ದಿನ 3 ಆಟಗಳು]

SUKH SAMPATH CHITRAPAT Rele...
Asoka Road, Mysore

Edited, Printed and Published by Dharma Prachara Nirata M. S. Krishna Rao, at the Satyavadi Press Chamrajpuram Mysore